# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 24.10.2013 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ : | |
| ಡಾ॥ಎಂ.ಎಸ್.ಶಿವಪ್ರಸಾದ್ – ಅಧ್ಯಕ್ಷರು | **ಅಧಿಕ ಕೌನ್ಸಿಲ್ ಕಾರ್ಯದರ್ಶಿ,** |
| ಎಂ.ಇ.ಪಿಳ್ಳಪ್ಪ – ಸದಸ್ಯರು | **ಸಹಾಯಕ ನಿಯಂತ್ರಕರು (ಹಣಕಾಸು-ಕೇಂದ್ರ),** |
| ವೀಣಾ ನಾಗರಾಜ್ – ಸದಸ್ಯರು | **ಮುಖ್ಯ ಅಭಿಯಂತರರು (ಪಶ್ಚಿಮ), (ಯಲಹಂಕ),** |
| ಗಂಗಾಧರ ಹೆಚ್.ಎನ್ – ಸದಸ್ಯರು | **ಸಹಾಯಕ ಆಯುಕ್ತರು (ಆಡಳಿತ), (ಜಾಹೀರಾತು),** |
| ಬಿ.ಎಸ್.ಆನಂದ್ – ಸದಸ್ಯರು | **ತಹಸೀಲ್ದಾರ್ (ಆಸ್ತಿಗಳು),** |
| ಕೃಷ್ಣ.ವಿ – ಸದಸ್ಯರು | **ಕಾರ್ಯಪಾಲಕ ಅಭಿಯಂತರರು (ಮಲ್ಲೇಶ್ವರಂ), (ಯೋಜನೆ-ಪಶ್ಚಿಮ),** |
| ಸಂಪತ್‌ರಾಜ್.ಆರ್ – ಸದಸ್ಯರು | **ಉಪ ಕಾನೂನು ಅಧಿಕಾರಿ,** |
| ಗೋವಿಂದರಾಜು.ಎನ್ – ಸದಸ್ಯರು | **ಸಹಾಯಕ ಅಭಿಯಂತರರು (ಕೆಂಪೇಗೌಡನಗರ),** |
| ಉದಯ್‌ಕುಮಾರ್.ಆರ್ – ಸದಸ್ಯರು | |
| ಸರಳ – ಸದಸ್ಯರು | **ಇತರೆ ಸಿಬ್ಬಂಧಿ ವರ್ಗ.** |
| ಸಿ.ಎಸ್.ರಾಧಾಕೃಷ್ಣ – ಸದಸ್ಯರು | |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

### ***01]. ವಿಷಯದ ಸಂಖ್ಯೆ :-ತೆಆಸ್ಥಾಸ/247/2012-13***

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ಎ3(4)ಪಿಆರ್/205/12-13, ದಿನಾಂಕ:13.02.2013 ರಲ್ಲಿ ವಿವರಿಸಿರುವಂತೆ, ವಾರ್ಡ್-142, ಮೌಂಟ್‌ಜಾಯ್ ರಸ್ತೆ ಮತ್ತು ಹನುಮಂತನಗರ 4ನೇ ಕ್ರಾಸ್, ಸೇರುವ ವಾರ್ಡ್ ಕಛೇರಿ ಆವರಣದಲ್ಲಿ 8ಥ ಅಡಿ ಅಳತೆಯ ನಂದಿನಿ ಹಾಲಿನ ಮಳಿಗೆ ಸ್ಥಾಪಿಸಲು ದಿ: 04-11-2002 ರಿಂದ 16-04-2007 ರವರೆಗೆ ಮಾಸಿಕ 400/- ರೂ. ಗಳಂತೆಯೂ ದಿನಾಂಕ: 17-04-2007 ರಿಂದ 04-11-2007 ರವರೆಗೆ ಮಾಸಿಕ 1,073/- ರೂ. ಗಳಂತೆ ಒಟ್ಟು 5 ವರ್ಷಗಳ ಅವಧಿಗೆ (04-11-2002 ರಿಂದ 03-

11-2007) ರವರೆಗೆ ಅನುಮತಿ ನೀಡಲಾಗಿದ್ದು, ಗುತ್ತಿಗೆದಾರರು ಜುಲೈ 2008 ರವರೆಗೆ ಪಾವತಿಸಿರುವುದಾಗಿ ವರದಿ ಮಾಡುತ್ತಾ, ಗುತ್ತಿಗೆ ಅವಧಿ ನವೀಕರಿಸಲು ವಲಯಾಧಿಕಾರಿಗಳು ಪ್ರಸ್ತಾಪಿಸಿರುತ್ತಾರೆ.

ಗುತ್ತಿಗೆ ಅವಧಿಯನ್ನು ಪುನಃ ನವೀಕರಿಸಲು ಅರ್ಜಿದಾರರು ಕೋರಿದ್ದು, ದಿನಾಂಕ: 17-04-2007ರ ಮಾರ್ಗಸೂಚಿ ದರಗಳನ್ವಯ ಸ್ವತ್ತಿನ ಮಾರುಕಟ್ಟೆ ದರ ಚದರಡಿ 1ಕ್ಕೆ 2000/- ರೂ. ವಾಣಿಜ್ಯಕ್ಕೆ ಶೇ: 40% ಸೇರಿಸಿದಲ್ಲಿ 2800/- ರೂ. ಗಳಾಗುತ್ತದೆ ಸ್ವತ್ತಿನ ಮೌಲ್ಯ 48 ಚದರಡಿಗಳಿಗೆ 1,34,400/- ರೂ. ಗಳಾಗುತ್ತದೆ. ಶೇ 10% ರಂತೆ ಪರಿಗಣಿಸಿದಲ್ಲಿ ವಾರ್ಷಿಕ 13,440/- ರೂ. ಮಾಸಿಕ 1120/- ರೂ. ಗಳಾಗುತ್ತದೆ.

ದಿನಾಂಕ: 26-09-2011 ರ ಮಾರ್ಗಸೂಚಿಯಂತೆ ಪರಿಷ್ಕೃತ ದರ ಚದರಡಿ 1 ಕ್ಕೆ 3000/- ರೂ. ಗಳಿದ್ದು, ವಾಣಿಜ್ಯಕ್ಕೆ 40% ಸೇರಿಸಿದಲ್ಲಿ ಚದರಡಿ 1 ಕ್ಕೆ 4200/- ರೂ. ಗಳಾಗುತ್ತದೆ. ಸ್ವತ್ತಿನ ಮೌಲ್ಯ 48 ಚ.ಅ ಥ 4200=201600/- ಗಳಾಗುತ್ತದೆ. ಶೇ: 10% ರಂತೆ ಪರಿಗಣಿಸಿದಲ್ಲಿ ವಾರ್ಷಿಕ 20,160/- ರೂ. ಗಳು ಮಾಸಿಕ 1680/- ರೂ ಗಳಾಗುತ್ತದೆ.

ನಂದಿನಿ ಹಾಲಿನ ಬೂತ್ ಮುಂದುವರೆಯುತ್ತಿದ್ದು, ನಂದಿನಿ ಬೂತ್ ನಡೆಸಲು ಪಾಲಿಕೆಯ ಜಾಗವನ್ನು ಉಪಯೋಗಿಸಿಕೊಂಡಿದ್ದು, ಇದರ ಪೂರ್ಣ ಲಾಭವನ್ನು ಅರ್ಜಿದಾರರು ಪಡೆದಿರುವುದರಿಂದ ಬಿಬಿಎಂಪಿ ಆರ್ಥಿಕ ಹಿತದೃಷ್ಟಿಯಿಂದ ದಿನಾಂಕ: 01-11-2007 ರಿಂದ 30-11-2012ರ ಘಟನೋತ್ತರ ಅವಧಿಗೆ ಆಯಾ ಆರ್ಥಿಕ ವರ್ಷದಲ್ಲಿ ನಿಗಧಿಪಡಿಸಿರುವ ಮಾರುಕಟ್ಟೆ ದರಗಳಂತೆ ಪಾವತಿಸಿಕೊಂಡು ದಿನಾಂಕ: 01-12-2012ರಿಂದ ಮುಂದಿನ 3-ವರ್ಷಗಳ ಅವಧಿಗೆ ನವೀಕರಿಸಬಹುದಾಗಿದ್ದು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ವಿಶೇಷ ಆಯುಕ್ತರ ದಿನಾಂಕ : 13.02.2013ರ ಟಿಪ್ಪಣಿಯನ್ನು ಒಪ್ಪಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 19.02.2013ರ ನಿರ್ಣಯ.

**ನಿರ್ಣಯ : ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 19.02.2013ರ ನಿರ್ಣಯವನ್ನು ಒಪ್ಪಿದೆ.**

## *12]. ವಿಷಯದ ಸಂಖ್ಯೆ :-ತೆಆಸ್ಥಾಸ/02/2013-14*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ : 18.03.2013ರಲ್ಲಿ ವಿವರಿಸಿರುವಂತೆ, ಉಪ ಅರಣ್ಯ ಸಂರಕ್ಷಣಾದಿಕಾರಿಗಳು, ಅರಣ್ಯ ಘಟಕ, ಬೆಂಗಳೂರು ಇವರ ದೈನಂದಿನ ಕೆಲಸಗಳ ನಿರ್ವಹಣೆಗಾಗಿ ಹೊರಗುತ್ತಿಗೆ ಆಧಾರದ ಮೇಲೆ ಅರಣ್ಯ ಕಾಮಗಾರಿಗಳ ಅನುಭವ ಇರುವ ಒಬ್ಬ ಸಲಹೆಗಾರರ ಸೇವೆ ಅತ್ಯಂತ ಅವಶ್ಯಕವಾಗಿರುತ್ತದೆ.

ಅರಣ್ಯ ಘಟಕವು ಕಳೆದ 5 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದು ಎಲ್ಲಾ 8 ವಲಯಗಳಲ್ಲಿ ಅರಣ್ಯೇಕರಣ ಕಾಮಗಾರಿಗಳು ನಿರ್ವಹಣೆಯಾಗುತ್ತಿರುತ್ತದೆ ಇದಲ್ಲದೆ ಎಲ್ಲಾ ವಲಯಗಳಲ್ಲಿ ಮರಗಳ ವ್ಯವಸ್ಥಿತ ಕಾರ್ಯ ನಿರ್ವಹಣೆಯೂ ಸಹಾ ಆಗುತ್ತಿರುತ್ತದೆ.

ಈ ಮುನ್ನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಬೆಂಗಳೂರು ಉತ್ತರ ಮತ್ತು ದಕ್ಷಿಣ ವ್ಯಾಪ್ತಿಯಲ್ಲಿ ಎರಡು ವಿಭಗಗಳಿದ್ದುಮ ಪ್ರಸ್ತುತ ಎರಡೂ ವಿಭಾಗಗಳಿಗೂ ಒಬ್ಬರೇ ಅರಣ್ಯ ಸಂರಕ್ಷಣಾದಿಕಾರಿಗಳು ಇರುತ್ತಾರೆ, ಆದ್ದರಿಂದ ವಿಭಾಗ ಮಟ್ಟದ ಕಾರ್ಯ ವ್ಯಾಪ್ತಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 8 ವಲಯಗಳೀಗೆ ಒಳಪಡುತ್ತದೆ. ಈ ಕಾರಣ ಅರಣ್ಯೇಕರಣ ಕಾಮಗಾರಿಗಳ ಕಛೇರಿ ಕಾರ್ಯ ನಿರ್ವಹಣೆಯ ಅನುಭವ ನೊಂದಿರುವ ಒಬ್ಬ ಸಲಹೆಗಾರರ ಅವಶ್ಯಕತೆ ಇರುತ್ತದೆ.

ಈ ಕಾರಣ ಕರ್ನಾಟಕ ಅರಣ್ಯ ಇಲಾಖೆಯಲ್ಲಿ ಪೂರ್ಣ ಪ್ರಮಾಣದ ಸೇವೆ ಸಲ್ಲಿಸಿ ಅನುಭವ ಹೊಂದಿರುವವರನ್ನು ಸಲಹೆಗಾರರನ್ನಾಗಿ ಪಡೆದು ವಿಭಾಗದ ಕಾಮಗಾರಿಗಳನ್ನು ಸಮರ್ಪಕವಾಗಿ ನಿರ್ವಹಿಸುವತ್ತ ಕ್ರಮ ತೆಗೆದುಕೊಳ್ಳುವುದು ಅತ್ಯಂತ ಅಗತ್ಯವಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಶೇಷಗಿರಿ ರಾವ್ ನಿವೃತ್ತ ಅಧೀಕ್ಷಕರು, ಇವರನ್ನು ಉಪ ಅರಣ್ಯ ಸಂರಕ್ಷಣಾಧಿಕರಿ ಯವರ ಕಛೇರಿಯಲ್ಲಿ ಸಲಲಲಹೆಗಾರರಾಗಿ ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಮಾಹೆಯಾನ ರೂ. 20,000-00 (ರೂ. ಇಪ್ಪತ್ತು ಸಾವಿರ ಮಾತ್ರ) ಗಳ ಸಂಚಿತ ವೇತನದ ಮೇಲೆ ನಿಯೋಜನೆ ಮಾಡಲು ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ : ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ : 18.03.2013ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

## ***ವಿಷಯದ ಸಂಖ್ಯೆ :-ತೆಆಸ್ಥಾ ಸ/10/2013-14***

ಆಯುಕ್ತರ ಟಿಪ್ಪಣಿ ದಿನಾಂಕ : 23.08.2013ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ವಿವಿಧ ಪ್ರದೇಶಗಳಲ್ಲಿ ಬಸ್ ಪ್ರಯಾಣಿಕರ ಅನುಕೂಲದ ಹಿತ ದೃಷ್ಟಿಯಿಂದ ಮೆ॥ ಟೈಮ್ಸ್ ಇನ್ನೊವೆಟೀವ್ ಮೀಡಿಯಾ ಪ್ರೈ ಲಿ., ಸಂಸ್ಥೆಯವರಿಗೆ ದಿನಾಂಕ:25.06.2008 ರಿಂದ 103 ಸ್ಥಳಗಳಲ್ಲಿ ಹಾಗೂ 6.10.2008 ರಿಂದ 60 ಸ್ಥಳಗಳಲ್ಲಿ ಬಸ್ ತಂಗುದಾಣಗಳನ್ನು ನಿರ್ಮಿಸಿ ನಿರ್ವಹಿಸಲು ಅನುಮತಿ ನೀಡಲಾಗಿದ್ದು, ಅವುಗಳ ಮೇಲೆ ಜಾಹೀರಾತು ಪ್ರದರ್ಶನಕ್ಕೆ ಅನುಮತಿ ನೀಡಲಾಗಿದ್ದ ಪ್ರತಿ ಬಸ್ ತಂಗುದಾಣದ ಜಾಹೀರಾತು ಪ್ರದರ್ಶನಕ್ಕೆ ಜಾಹೀರಾತು ಶುಲ್ಕವನ್ನು ಚದರ ಮೀಟರ್ ಒಂದಕ್ಕೆ ರೂ.86.25ರಂತೆ ನಿಗದಿಪಡಿಸಲಾಗಿತ್ತು. ನಂತರ ಜಾಹೀರಾತು ಬೈಲಾ-2006ರ ತಿದ್ದುಪಡಿ ಬೈಲಾ ಮೇರೆಗೆ ದಿನಾಂಕ:01.10.2009 ರಿಂದ ಅನ್ವಯವಾಗುವಂತೆ ಹಿಂದೆ ನಿಗಧಿಪಡಿಸಿದ್ದ ರೂ.86.25/-ಗಳ ಚದರ ಮೀಟರ್‌ನ್ನು ಹೆಚ್ಚಿಸಿ ರೂ.129/-ಕ್ಕೆ ನಿಗಧಿಪಸಿಲಾಗಿತ್ತು. ಪುನಃ ಜಾಹೀರಾತು ಬೈಲಾ ತಿದ್ದುಪಡಿ 2012 ರಂತೆ ದಿನಾಂಕ:03.03.2012 ರಿಂದ ಅನ್ವಯವಾಗುವಂತೆ ಚದರ ಮೀಟರ್ ಒಂದಕ್ಕೆ ರೂ.260/-ರ ದರದಲ್ಲಿ ಪರಿಷ್ಕೃತ ದರದಂತೆ ನಿಗಧಿಪಡಿಸಲಾಗಿದೆ.

ಮುಂದುವರೆದಂತೆ, ಪರಿಷ್ಕೃತ ದರದಲ್ಲಿ ಜಾಹೀರಾತು ಶುಲ್ಕವನ್ನು ಪಾವತಿಸುವಂತೆ ಸೂಚಿಸಿ ಸದರಿ ಸಂಸ್ಥೆಯವರಿಗೆ ದಿನಾಂಕ:03.01.2013 ಹಾಗೂ 23.03.2013 ರಂದು ನೋಟೀಸ್‌ಗಳನ್ನು ಜಾರಿ ಮಾಡಿದ್ದರೂ ಸಹ ಸದರಿ ಸಂಸ್ಥೆಯವರು ನಿಗಧಿತ ಜಾಹೀರಾತು ಶುಲ್ಕ ಪಾವತಿಸಲು ವಿಫಲರಾದ ಹಿನ್ನೆಲೆಯಲ್ಲಿ ದಿನಾಂಕ:19.07.2013 ರಂದು ಅಂತಿಮ ನೋಟೀಸ್ ಜಾರಿ ಮಾಡಲಾಗಿದ್ದು, ಸದರಿ ಸಂಸ್ಥೆಯವರು ಒಟ್ಟು ಬಾಕಿ ಮೊತ್ತ ರೂ.10,74,91,862/-ಗಳಲ್ಲಿ ರೂ.3.00 ಕೋಟಿಗಳನ್ನು ದಿನಾಂಕ:03.08.2013 ರಂದು ಪಾವತಿಸಿದ್ದು, ಉಳಿಕೆ ಮೊತ್ತ ರೂ.7,74,91,862/-ಗಳು ಬಾಕಿ ಇರುತ್ತದೆ.

ದಿನಾಂಕ:17.05.2013 ರಂದು ತಮಗೆ ಹಂಚಿಕೆಯಾಗಿರುವ ಬಸ್ ತಂಗುದಾಣಗಳಲ್ಲಿ ಮೆಟ್ರೋ ಕಾಮಗಾರಿ, ರಸ್ತೆ ಅಗಲೀಕರಣ ಮುಂತಾದ ಕಾರಣಗಳಿಂದ ಕೆಲವು ಬಸ್ ತಂಗುದಾಣಗಳನ್ನು ತೆರವುಗೊಳಿಸಿ ಸ್ಥಳಾಂತರಗೊಳಿಸಲಾಗಿದೆ ಹಾಗೂ ಈಗ ಬಸ್ ತಂಗುದಾಣಗಳ ಸಂಖ್ಯೆ ಹೆಚ್ಚಾಗಿದ್ದು, ಬಸ್ ತಂಗುದಾಣಗಳ ಮೇಲೆ ಅಳವಡಿಸಲಾಗಿರುವ ಜಾಹೀರಾತುಗಳಿಂದ ಬರುತ್ತಿರುವ ಆದಾಯವು ಸಹ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಜಾಹೀರಾತು ತೆರಿಗೆಯಲ್ಲಿ ವಿನಾಯಿತಿ ನೀಡಬೇಕೆಂದು ಪತ್ರ ಮುಖೇನ ಕೋರಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆದಾಯದ ಹಿತ ದೃಷ್ಟಿಯಿಂದ ಹಾಗೂ ಸದರಿ ಸಂಸ್ಥೆಯವರಿಗೆ ಉಂಟಾಗಿರುವ ಅನಾನುಕೂಲಗಳನ್ನು ಪರಿಗಣನೆಗೆ ತೆಗೆದುಕೊಂಡು ಸದರಿ ಸಂಸ್ಥೆಯವರು ಪಾಲಿಕೆಗೆ ಪಾವತಿಸಬೇಕಾದ ಜಾಹೀರಾತು ಶುಲ್ಕದ ಒಟ್ಟು ಮೊತ್ತದಲ್ಲಿ ಶೇ 10% ರಷ್ಟು ವಿನಾಯಿತಿ ನೀಡುವ ಕುರಿತು ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಟಿಪ್ಪಣಿ.

**-ಮಾಹಿತಿಗಾಗಿ ಮುಂದೂಡಿದೆ-**

## ***ವಿಷಯದ ಸಂಖ್ಯೆ :-ತೆಆಸ್ಥಾ ಸ/11/2013-14***

ಆಯುಕ್ತರ ಟಿಪ್ಪಣಿ ದಿನಾಂಕ : 06.09.2013ರಲ್ಲಿ ವಿವರಿಸಿರುವಂತೆ, ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 232 ಸಿಸೇನಿ 2011, ಬೆಂಗಳೂರು, ದಿ: 22-10-2011ರ ಆದೇಶದಲ್ಲಿ ಸರ್ಕಾರದ ವಿವಿಧ ವರ್ಗದ ಅಧಿಕಾರಿಗಳಿಗೆ ನೀಡುತ್ತಿರುವ ಗೃಹ ಪರಿಚಾರಕ ಭತ್ಯೆಗಳನ್ನು ಈ ಕೆಳಕಂಡಂತೆ ಹೆಚ್ಚಿಸಲಾಗಿರುತ್ತದೆ.

| ಕ್ರಮ ಸಂಖ್ಯೆ | ಅಧಿಕಾರಿ ವರ್ಗ | ಗೃಹ ಪರಿಚಾರಕ ಭತ್ಯೆ |
|---|---|---|
| 1. | ಮುಖ್ಯ ಕಾರ್ಯದರ್ಶಿಗಳು / ಅಪರ ಮುಖ್ಯ ಕಾರ್ಯದರ್ಶಿಗಳು | ಮಾಸಿಕ ರೂ. 8000/- |
| 2. | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು | ಮಾಸಿಕ ರೂ. 6000/- |
| 3. | ಸರ್ಕಾರದ ಕಾರ್ಯದರ್ಶಿಗಳು | ಮಾಸಿಕ ರೂ.5000/- |

| | | |
|---|---|---|
| 4. | ಇಲಾಖಾ ಮುಖ್ಯಸ್ಥರು | ಮಾಸಿಕ ರೂ. 3000/- |

ಈ ಆದೇಶವು ದಿನಾಂಕ: 01-10-2011 ರಿಂದ ಜಾರಿಗೆ ಬರುತ್ತದೆ. ಅಧಿಕಾರಿಗಳ ನಿವಾಸಕ್ಕೆ ಕಛೇರಿಯಿಂದ ಗೃಹ ಪರಿಚಾರಕನನ್ನು ಒದಗಿಸದಿದ್ದಲ್ಲಿ ಮಾತ್ರ ಈ ಭತ್ಯೆಯನ್ನು ನೀಡಲಾಗುವುದು ಈ ಭತ್ಯೆಯನ್ನು ಮಂಜೂರು ಮಾಡಲು ಈ ಹಿಂದೆ ವಿಧಿಸಿರುವ ಇತರೆ ನಿರ್ಬಂಧಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಹಾಗೂ ಈ ಆದೇಶವನ್ನು ಅನಧಿಕೃತ ಟಿಪ್ಪಣಿ ಸಂಖ್ಯೆ: ಎಫ್‌ಡಿ 10 ಎಸ್‌ಆರ್‌ಪಿ 2011 ದಿನಾಂಕ: 06-08-2011ರಲ್ಲಿನ ಆರ್ಥಿಕ ಇಲಾಖೆಯ ಸಹಮತಿಯನ್ವಯ ಹೊರಡಿಸಲಾಗಿದೆ. (ಸರ್ಕಾರಿ ಆದೇಶದ ಪ್ರತಿಯನ್ನು ಮಾಹಿತಿಗಾಗಿ ಲಗತ್ತಿಸಿದೆ.)

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ/232/ಸಿಸೇನಿ/2011, ಬೆಂಗಳೂರು ದಿನಾಂಕ: 22-10-2011ರಲ್ಲಿ ಸೂಚಿಸಿರುವಂತೆ ಪರಿಚಾರಕ ಭತ್ಯೆಯನ್ನು ಹೆಚ್ಚಿಸುವ ಸೌಲಭ್ಯವನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ಪಡೆದು, ನಂತರ ಪಾಲಿಕೆಯ ಅರ್ಹ ನೌಕರರಿಗೆ ವಿಸ್ತರಿಸಬಹುದೆಂದು ಉಪ ನಿಯಂತ್ರಕರು (ಹಣಕಾಸು) ರವರು ಉಪ ನಿಯಂತ್ರಕರು (ಹಣಕಾಸು) ರವರ ವರದಿ ದಿ: 06-04-2013ರಂತೆ ಅಭಿಪ್ರಾಯ ವರದಿಯನ್ನು ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 232 ಸಿಸೇನಿ 2011, ಬೆಂಗಳೂರು ದಿ: 22-10-2011ರ ಸರ್ಕಾರಿ ಆದೇಶವನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ : ಆಯುಕ್ತರ ದಿನಾಂಕ : 06.09.2013ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

## *ವಿಷಯದ ಸಂಖ್ಯೆ :-ತೆಆಸ್ಥಾಸ/12/2013-14*

ಆಯುಕ್ತರ ಟಿಪ್ಪಣಿ ದಿನಾಂಕ : 06.09.2013ರಲ್ಲಿ ವಿವರಿಸಿರುವಂತೆ, ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 3 ಎಸ್‌ಆರ್‌ಪಿ 96, ದಿನಾಂಕ 18.03.1996 ರ ನ್ವಯ ಸರ್ಕಾರಿ ನೌಕರರು ಧಾರಣ ಮಾಡಿರುವ ಹುದ್ದೆಗೆ ಅನ್ವಯವಾಗುವ ವೇತನ ಶ್ರೇಣಿಯ ಗರಿಷ್ಟ ಹಂತವನ್ನು ತಲುಪಿ ಸ್ಥಗಿತಗೊಂಡಿದ್ದಲ್ಲಿ ಅವರ ಪೂರ್ಣ ಸೇವಾ ಅವಧಿಯಲ್ಲಿ ಅವರು ಕಡೆಯದಾಗಿ ಪಡೆದ ವಾರ್ಷಿಕ ವೇತನ ಬಡ್ತಿಯ ದರದಲ್ಲಿ ಗರಿಷ್ಟ 5 ವಾರ್ಷಿಕ ಸ್ಥಗಿತ ವೇತನ ಬಡ್ತಿಗಳನ್ನು ದಿನಾಂಕ 01.04.1996 ರಿಂದ ಜಾರಿಗೆ ಬರುವಂತೆ ಪಡೆಯಲು ಅರ್ಹರಾಗಿರುತ್ತಾರೆ. ಅದರಂತೆ ಈ ಮೇಲಿನ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 12 ಎಸ್‌ಆರ್‌ಪಿ 2012(ಗಿಖಖ) ಬೆಂಗಳೂರು, ದಿನಾಂಕ 14.06.2012ರ ಆದೇಶದಲ್ಲಿ, ಸರ್ಕಾರವು ರಾಜ್ಯ ವೇತನ ಶ್ರೇಣಿಯ ಗರಿಷ್ಟ ಹಂತವನ್ನು ತಲುಪಿ ಸ್ಥಗಿತಗೊಂಡಿರುವ ಸರ್ಕಾರಿ ನೌಕರರಿಗೆ ಪ್ರಸ್ತುತ ನೀಡುತ್ತಿರುವ 5 ಸ್ಥಗಿತ ವೇತನ ಬಡ್ತಿಗಳನ್ನು 8 ಸ್ಥಗಿತ ವೇತನ ಬಡ್ತಿಗಳಿಗೆ ದಿನಾಂಕ 1ನೇ ಏಪ್ರಿಲ್ 2012 ರಿಂದ ಜಾರಿಗೆ ಬರುವಂತೆ ಹೆಚ್ಚಿಸಿರುತ್ತದೆ.

ಸದರಿ ಆದೇಶದಲ್ಲಿ ದಿನಾಂಕ 1ನೇ ಏಪ್ರೀಲ್ 2012 ರ ಪೂರ್ವದಲ್ಲಿ 5 ಸ್ಥಗಿತ ವೇತನ ಬಡ್ತಿಗಳ ಸೌಲಭ್ಯವನ್ನು ಪಡೆದಿರುವ ಸರ್ಕಾರಿ ನೌಕರನಿಗೆ 6ನೇ ಸ್ಥಗಿತ ವೇತನ ಬಡ್ತಿಯನ್ನು 5ನೇ ಸ್ಥಗಿತ ವೇತನ ಬಡ್ತಿ ನೀಡಿದ ದಿನಾಂಕದಿಂದ ಒಂದು ವರ್ಷ ಪೂರ್ಣಗೊಂಡ ದಿನಾಂಕದಂದು ಅಥವಾ ದಿನಾಂಕ 1ನೇ ಏಪ್ರಿಲ್ 2012 ರಂದು, ಇದರಲ್ಲಿ ಯಾವುದು ನಂತರವೋ ಆ ದಿನಾಂಕದಂದು ಪ್ರಾಪ್ತವಾಗುತ್ತವೆ ಹಾಗೂ ಸ್ಥಗಿತ ವೇತನ ಬಡ್ತಿಗಳನ್ನು ಕ್ರಮಬದ್ಧಗೊಳಿಸಲು ವಿಧಿಸಿರುವ ಇತರೇ ಷರತ್ತುಗಳು ಮುಂದುವರೆದು ಅನ್ವಯವಾಗುತ್ತದೆ ಎಂದು ತಿಳಿಸಲಾಗಿರುತ್ತದೆ.

ಮುಖ್ಯ ಲೆಕ್ಕಾಧಿಕಾರಿಗಳ ವರದಿ ದಿನಾಂಕ 13.12.2012ರಲ್ಲಿ, ಮುಖ್ಯ ಲೆಕ್ಕಾಧಿಕಾರಿಗಳು, ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 12 ಎಸ್‌ಆರ್‌ಪಿ 2012(ಗಿಖಖ) ಬೆಂಗಳೂರು, ದಿನಾಂಕ 14.06.2012 ರನ್ವಯ ವೇತನ ಶ್ರೇಣಿಯ ಗರಿಷ್ಠ ಹಂತವನ್ನು ತಲುಪಿ ಸ್ಥಗಿತಗೊಂಡಿರುವ ಸರ್ಕಾರಿ ನೌಕರರಿಗೆ ಪ್ರಸ್ತುತ ನೀಡುತ್ತಿರುವ 5 ಸ್ಥಗಿತ ವೇತನ ಬಡ್ತಿಗಳನ್ನು 8 ಸ್ಥಗಿತ ವೇತನ ಬಡ್ತಿಗಳಿಗೆ ದಿನಾಂಕ 01.04.2012 ರಿಂದ ಜಾರಿಗೆ ಬರುವಂತೆ ಸರ್ಕಾರದಲ್ಲಿ ಪರಿಷ್ಕರಿಸಿದ್ದು, ಸದರಿ ಸೌಲಭ್ಯವನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ಪಡೆದು, ನಂತರ ಸದರಿ ಸೌಲಭ್ಯವನ್ನು ಪಾಲಿಕೆಯಲ್ಲಿನ ಅಧಿಕಾರಿ/ಸಿಬ್ಬಂದಿಗಳಿಗೆ ವಿಸ್ತರಿಸಬಹುದೆಂದು ಅಭಿಪ್ರಾಯ ನೀಡಿರುತ್ತಾರೆ.

ಆದುದರಿಂದ ಮೇಲಿನ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 12 ಎಸ್‌ಆರ್‌ಪಿ 2012(ಗಿಖಖ) ಬೆಂಗಳೂರು, ದಿನಾಂಕ 14.06.2012ರ ಸರ್ಕಾರದ ಅಧಿಸೂಚನೆಯನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು ಹಾಗೂ ಮುಂದಿನ ಕ್ರಮವನ್ನು ತೆಗೆದುಕೊಳ್ಳಲು ಟಿಪ್ಪಣಿಯನ್ನು ಅನುಮೋದನೆಗೆ ಮಂಡಿಸಿದೆ.

**ನಿರ್ಣಯ : ಆಯುಕ್ತರ ದಿನಾಂಕ : 06.09.2013ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

## ***ವಿಷಯದ ಸಂಖ್ಯೆ :–ತೆಆಸ್ಥಾಸ/13/2013–14***

ಆಯುಕ್ತರ ಟಿಪ್ಪಣಿ ದಿನಾಂಕ : 16.10.2013ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು, ಸ್ಯಾನಿಟರಿ ದಫೇದಾರ್, ಗ್ಯಾಂಗ್‌ಮೆನ್, ಕ್ಲೀನರ್, ತೋಟಗಾರಿಕೆ ಮಾಲಿ, ತೋಟಗಾರಿಕೆ ಮೇಸ್ತ್ರಿ, ಭದ್ರತಾ ಪಡೆ ನೌಕರರು, ಅರ್ಹತೆ ಇರುವ ಡಿ ಗ್ರೂಫ್ ನೌಕರರು ಹಾಗೂ ಚಾಲಕರುಗಳಿಗೆ 2005–06ನೇ ಸಾಲಿನಿಂದ 2009–10ನೇ ಸಾಲಿನವರೆಗೆ ಈ ಕಛೇರಿ ಆದೇಶ ಸಂಖ್ಯೆ: ಆರ್2ಪಿಆರ್/339/2005–06, ದಿ: 23–09–2005ರ ಕಛೇರಿ ಆದೇಶದಲ್ಲಿ ಈ ಕೆಳಕಂಡ ಪರಿಕರಗಳ ಮುಂದೆ ನಮೂದಿಸಿರುವ ದರಗಳಲ್ಲಿ ಆಯಾ ನೌಕರರ ಬ್ಯಾಂಕ್ ಖಾತೆಗೆ ಅರ್ಹ ಮೊತ್ತ ಜಮಾ ಮಾಡಲು ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳಿಗೆ ಆದೇಶಿಸಲಾಗಿರುತ್ತದೆ. ಸದರಿ ಪರಿಕರಗಳನ್ನು 2010–11ನೇ ಸಾಲಿನಿಂದ ಈ ತಹಲ್‌ವರೆವಿಗೂ ನೀಡಿರುವುದಿಲ್ಲ.

| ಕ್ರ.ಸಂ. | ಹುದ್ದೆಯ ವಿವರಗಳು | ಪರಿಕರಗಳ ವಿವರಗಳು | ದರದ ವಿವರಗಳು ಪ್ರತಿ ಜೊತೆಗೆ (ರೂ.ಗಳಲ್ಲಿ) (ಪ್ರತಿ ಸಾಲಿಗೆ) |
|---|---|---|---|
| 1 | ಪುರುಷ ಪೌರಕಾರ್ಮಿಕರಿಗೆ | 2 ಜೊತೆ ಪಾದರಕ್ಷೆ | 680–00 + ಮೌಲ್ಯವರ್ಧಿತ ತೆರಿಗೆ ಪ್ರತ್ಯೇಕ |
| 2 | ಮಹಿಳಾ ಪೌರಕಾರ್ಮಿಕರಿಗೆ | 2 ಜೊತೆ ಪಾದರಕ್ಷೆ | 525–00 + ಮೌಲ್ಯವರ್ಧಿತ ತೆರಿಗೆ ಪ್ರತ್ಯೇಕ |
| 3 | ನಾಲ್ಕನೇ ದರ್ಜೆ ನೌಕರರಿಗೆ (ಪುರುಷರಿಗೆ) | 1 ಜೊತೆ ಷೂ + 2 ಜೊತೆ ಕಾಲು ಚೀಲುಗಳು | 880–00 + 46–00 ಮೌಲ್ಯವರ್ಧಿತ ತೆರಿಗೆ ಪ್ರತ್ಯೇಕ |
| 4 | ನಾಲ್ಕನೇ ದರ್ಜೆ ನೌಕರರಿಗೆ (ಮಹಿಳೆಯರಿಗೆ) | 1 ಜೊತೆ ಪಾದರಕ್ಷೆ | 525–00 + ಮೌಲ್ಯವರ್ಧಿತ ತೆರಿಗೆ ಪ್ರತ್ಯೇಕ |
| 5 | ಚಾಲಕರು | 1 ಜೊತೆ ಷೂ + 2 ಜೊತೆ ಕಾಲು ಚೀಲುಗಳು | 880–00 + 46–00 ಮೌಲ್ಯವರ್ಧಿತ ತೆರಿಗೆ ಪ್ರತ್ಯೇಕ |

ಅಧ್ಯಕ್ಷರು ಮತ್ತು ಕಾರ್ಯದರ್ಶಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ / ನೌಕರರ ಸಂಘ (ರಿ) ರವರು ದಿನಾಂಕ: 25–06–2013 ರಂದು ಮನವಿ ಸಲ್ಲಿಸಿ, ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಚಾಲಕರು ಹಾಗೂ ಎಲ್ಲಾ ನಾಲ್ಕನೇ ದರ್ಜೆ ನೌಕರರುಗಳಿಗೆ 2005–06ನೇ ಸಾಲಿನಿಂದ 2009–10ನೇ ಸಾಲಿನವರೆಗೆ ನೀಡಲಾಗುತ್ತಿರುವ ಪರಿಕರಗಳ ಬದಲಾಗಿ ದಿನಾಂಕ: 11–04–2011ರ ಆದೇಶದಂತೆ ಹಣ ಸಂದಾಯ ಮಾಡಲಾಗಿರುತ್ತದೆ. ಆದರೆ, 2010–11, 2011–12 ಮತ್ತು 2012–13ನೇ ಸಾಲಿನಲ್ಲಿ ಪರಿಕರಗಳನ್ನು ಮೊತ್ತವನ್ನು ಈ ತಹಲ್‌ವರೆವಿಗೂ ನೀಡದೇ ಇರುವುದರಿಂದ 2010–11, 2011–12 ಮತ್ತು 2012–13ನೇ ಸಾಲಿನ ಪರಿಕರಗಳ ಬದಲಾಗಿ ನೀಡುವ ಹಣವನ್ನು ಚಾಲಕರು ಹಾಗೂ ಎಲ್ಲಾ ನಾಲ್ಕನೇ ದರ್ಜೆ ನೌಕರರುಗಳಿಗೆ ಇದೇ ಮಾನದಂಡ ಅನುಸರಿಸಿ ನಗದು ಹಣ ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.
ಆದ್ದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪುರುಷ / ಮಹಿಳಾ ಪೌರಕಾರ್ಮಿಕರು, ಪುರುಷ / ಮಹಿಳಾ ಎಲ್ಲಾ ನಾಲ್ಕನೇ ದರ್ಜೆ ನೌಕರರುಗಳು, ಚಾಲಕರುಗಳಿಗೆ ಈ ಕೆಳಕಂಡ ಪರಿಕರಗಳನ್ನು 2010–11ನೇ ಸಾಲಿನಿಂದ 2012–13ನೇ ಸಾಲಿನವರೆಗೆ ಪರಿಕರಗಳ ಮುಂದೆ ನಮೂದಿಸಿರುವ ದರಗಳಲ್ಲಿ ಆಯಾ ನೌಕರರ ಬ್ಯಾಂಕ್ ಖಾತೆಗೆ ಅರ್ಹ ಮೊತ್ತವನ್ನು ಜಮಾ ಮಾಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.

| ಕ್ರ.ಸಂ. | ಹುದ್ದೆಯ ವಿವರಗಳು | ಪರಿಕರಗಳ ವಿವರಗಳು | ದರದ ವಿವರಗಳು ಪ್ರತಿ ಜೊತೆಗೆ (ರೂ.ಗಳಲ್ಲಿ) (ಪ್ರತಿ ಸಾಲಿಗೆ) |
|---|---|---|---|
| 1 | ಪುರುಷ ಪೌರಕಾರ್ಮಿಕರಿಗೆ | 2 ಜೊತೆ ಪಾದರಕ್ಷೆ | 680-00 + ಮೌಲ್ಯವರ್ಧಿತ ತೆರಿಗೆ ಪ್ರತ್ಯೇಕ |
| 2 | ಮಹಿಳಾ ಪೌರಕಾರ್ಮಿಕರಿಗೆ | 2 ಜೊತೆ ಪಾದರಕ್ಷೆ | 525-00 + ಮೌಲ್ಯವರ್ಧಿತ ತೆರಿಗೆ ಪ್ರತ್ಯೇಕ |
| 3 | ನಾಲ್ಕನೇ ದರ್ಜೆ ನೌಕರರಿಗೆ (ಪುರುಷರಿಗೆ) | 1 ಜೊತೆ ಷೂ + 2 ಜೊತೆ ಕಾಲು ಚೀಲುಗಳು | 880-00 + 46-00 ಮೌಲ್ಯವರ್ಧಿತ ತೆರಿಗೆ ಪ್ರತ್ಯೇಕ |
| 4 | ನಾಲ್ಕನೇ ದರ್ಜೆ ನೌಕರರಿಗೆ (ಮಹಿಳೆಯರಿಗೆ) | 1 ಜೊತೆ ಪಾದರಕ್ಷೆ | 525-00 + ಮೌಲ್ಯವರ್ಧಿತ ತೆರಿಗೆ ಪ್ರತ್ಯೇಕ |
| 5 | ಚಾಲಕರು | 1 ಜೊತೆ ಷೂ + 2 ಜೊತೆ ಕಾಲು ಚೀಲುಗಳು | 880-00 + 46-00 ಮೌಲ್ಯವರ್ಧಿತ ತೆರಿಗೆ ಪ್ರತ್ಯೇಕ |

**ನಿರ್ಣಯ : ಆಯುಕ್ತರ ದಿನಾಂಕ : 16.10.2013ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

## ***ವಿಷಯದ ಸಂಖ್ಯೆ :-ತೆಆಸ್ಥಾಸ/14/2013-14***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 12-09-2013ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಜಯನಗರ ವಿಧಾನ ಸಭಾ ಕ್ಷೇತ್ರದ, ವಾರ್ಡ್ ಸಂಖ್ಯೆ:168ರ ವ್ಯಾಪ್ತಿಯ ಜಯನಗರ 4ನೇ ಟಿ ಬಡಾವಣೆಯ 18ನೇ ಮುಖ್ಯ ರಸ್ತೆಯಲ್ಲಿರುವ ಪಾಲಿಕೆಯ ಷಟಲ್ ಬ್ಯಾಡ್ಮಿಂಟನ್ ಒಳಾಂಗಣ ಹಾಗೂ ಕಟ್ಟಡವನ್ನು ನಿರ್ವಹಣೆ ಮತ್ತು ನಡೆಸಿಕೊಂಡು ಹೋಗಲು ಸಾಂಕೇತಿಕ ಬಾಡಿಗೆ ಆಧಾರದಲ್ಲಿ ರಕ್ಷಾ ಫೌಂಡೇಷನ್ (ರಿ) ಸಂಘಕ್ಕೆ ವಹಿಸಿಕೊಡುವ ಬಗ್ಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸದರಿ ಕ್ರೀಡಾಂಗಣದ ನೋಂದಾಯಿತ 58 ಸದಸ್ಯರು ಪ್ರತಿ ತಿಂಗಳಿಗೆ ರೂ. 750/- ಗಳಂತೆ ಪಾವತಿಸುತ್ತಿದ್ದು, ಒಟ್ಟು ಮೊತ್ತ ರೂ. 43,500/- ಗಳು ಆದಾಯ ಬರುತ್ತಿರುವುದಾಗಿ, ಸದರಿ ಕ್ರೀಡಾಂಗಣದ ನಿರ್ವಹಣೆಯ ಸಹಾಯಕರಾಗಿ ಎರಡು ಪಾಳಿಗಳಲ್ಲಿ ಕೆಲಸ ನಿರ್ವಹಿಸಲು ರೂ. 11,454/- ಗಳು ಹಾಗೂ ಕಾವಲುಗಾರರಿಗೆ ರೂ. 11,454/- ಗಳು ಬೇಕಾಗಿದ್ದು, ಒಳಾಂಗಣ ಕ್ರೀಡಾಂಗಣದ ನಿರ್ವಹಣೆಗೆ ಶೇ. 10% ರಷ್ಟು ರಂತೆ ರೂ.4,350/- ಗಳು ಬೇಕಾಗಿದ್ದು, ಈ ಎಲ್ಲಾ ಖರ್ಚುಗಳು ಕಳೆದು ರೂ. 5,000/- ಗಳು ಪಾಲಿಕೆ ಆದಾಯ ಇರುವುದಾಗಿ ವರದಿಸಿರುತ್ತಾರೆ.

ಕಾರ್ಯಪಾಲಕ ಅಭಿಯಂತರರು (ಜಯನಗರ) ವಿಭಾಗ ರವರು ಸಲ್ಲಿಸಿರುವ ಪ್ರಸ್ತಾವನೆಯಂತೆ ಮೇಲ್ಕಂಡ ಕಟ್ಟಡ ಮತ್ತು ಕ್ರೀಡಾಂಗಣವನ್ನು ರಕ್ಷಾ ಫೌಂಡೇಷನ್ (ರಿ) ರವರಿಗೆ ಚಾಲ್ತಿಯಲ್ಲಿರುವ ಷರತ್ತುಗಳನ್ನೊಳಗೊಂಡಂತೆ ಎಂ.ಓ.ಯು. ಮಾಡಿಕೊಂಡು ಬಾಡಿಗೆ ಆಧಾರದ ಮೇಲೆ 5 ವರ್ಷಗಳ ಅವಧಿಗೆ ವಹಿಸಿಕೊಡಲು ಅನುಮೋದನೆ ನೀಡಲು ಕೋರಿರುವ ಪ್ರಸ್ತಾವನೆಗೆ ಅನುಮೋದನೆ ಕೋರಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಮೇರೆಗೆ, ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 12-09-2013ರ ಟಿಪ್ಪಣಿಯನ್ನು ಒಪ್ಪಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿಯ ದಿನಾಂಕ : 01.10.2013ರ ನಿರ್ಣಯ.

**ನಿರ್ಣಯ : ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 01.10.2013ರ ನಿರ್ಣಯವನ್ನು ಒಪ್ಪಿದೆ.**

## ***ವಿಷಯದ ಸಂಖ್ಯೆ :-ತೆಆಸ್ಥಾಸ/15/2013-14***

ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 21-06-2013ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ: 142ರ ಪಂಪಮಹಾಕವಿ ರಸ್ತೆಯಲ್ಲಿರುವ ಮಹಾನಗರ ಪಾಲಿಕೆಯ ಈಜುಕೊಳವನ್ನು ಬಸವನಗುಡಿ ಅಕ್ವಾಟಿಕ್ ಸೆಂಟರ್ (ರಿ) ರವರು ನಿರ್ವಹಿಸುತ್ತಿದ್ದು, ಸಾರ್ವಜನಿಕರ ಪ್ರವೇಶ ಶುಲ್ಕವನ್ನು

ಪರಿಷ್ಕರಿಸಿ ಹೆಚ್ಚಿಸುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯಲ್ಲಿ "ಈಜುಕೊಳದ ನಿರ್ವಹಣಾ ವೆಚ್ಚಗಳು" ದುಬಾರಿಯಾಗಿರುವುದರಿಂದ ಪ್ರವೇಶ ದರಗಳನ್ನು ಸಾರ್ವಜನಿಕರಿಗೆ ಉತ್ತಮ ಸೇವೆಯನ್ನು ಒದಗಿಸುವ ದೃಷ್ಟಿಯಿಂದ ಮತ್ತು ಈಜುಕೊಳವನ್ನು ಉನ್ನತ ಮಟ್ಟದಲ್ಲಿ ನಿರ್ವಹಣೆ ಮಡುವುದಕ್ಕಾಗಿ ಹೆಚ್ಚಿಸಲು ಉದ್ದೇಶಿಸಲಾಗಿರುತ್ತದೆ. ರಾಜ್ಯದ ಬೇರೆ ಬೇರೆ ಈಜುಕೊಳಗಳಲ್ಲಿ ಹಾಲಿ ಇರುವ ದರಗಳನ್ನು ಈ ಕೆಳಕಂಡಂತೆ ನೀಡಿರುತ್ತಾರೆ.

| ಕ್ರಮ ಸಂಖ್ಯೆ | ಈಜುಕೊಳದ ಹೆಸರು | ಪ್ರವೇಶ ದರಗಳು | |
|---|---|---|---|
| | | ಹಿರಿಯರಿಗೆ | ಕಿರಿಯರಿಗೆ |
| 1 | Davan's swimming centre, Davanagere | Rs.20/- | Rs.15/- |
| 2 | Mysore University Swimming Centre, Mysore | Rs.20/- | Rs.15/- |
| 3 | Ramakrishna Hegde Swimming Pool, J.P.Park, Mattikere, Bangalore | Rs.20/- | Rs.15/- |
| 4 | Pooja agencies, BSK II Stage Corporation Swimming Pool, Bangalore | Rs.20/- | Rs.10/- |

ಈ ಮೇಲ್ಕಂಡ ಅಂಶಗಳನ್ನು ಪರಿಗಣಿಸಿ ಪ್ರಸ್ತುತ ನಿರ್ವಹಣೆ ವೆಚ್ಚಗಳು ಅತ್ಯಂತ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಬಸವನಗುಡಿ ಅಕ್ವಾಟಿಕ್ ಸೆಂಟರ್ (ರಿ) ರವರು ವಯಸ್ಕರರಿಗೆ ಈಗಿರುವ ದರಗಳು ರೂ. 16.00 ರಿಂದ ರೂ. 30.00ಗಳಿಗೆ ಹೆಚ್ಚಿಸಲು ಮತ್ತು ಮಕ್ಕಳಿಗೆ ರೂ. 8.00 ರಿಂದ ರೂ. 15.00 ಗಳಿಗೆ ಹೆಚ್ಚಿಸಿ ದರ ನಿಗಧಿಪಡಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ದರಗಳನ್ನು ಯಾವುದೇ ಲಾಭದ ದೃಷ್ಟಿಯಿಂದ ಹೆಚ್ಚಿಸದೇ ಕೇವಲ ನಿರ್ವಹಣೆಗಾಗಿ ಹೆಚ್ಚಿಸಬಹುದಾಗಿರುತ್ತದೆ.

ಸದರಿಯವರು ಕೋರಿರುವ ಪರಿಷ್ಕೃತ ದರ ನಿಗಧಿ ಬಗ್ಗೆ ಪ್ರಸ್ತಾವನೆಯನ್ನು ಸಮಿತಿಯ ಮುಂದೆ ಮಂಡಿಸಿರುವ ಮೇರೆಗೆ, ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 21-06-2013ರ ಟಿಪ್ಪಣಿಯನ್ನು ಪರಿಶೀಲಿಸಲಾಗಿ, ಸದರಿ ಕಡತವು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಸಂಬಂಧಿಸಿದ ವಿಷಯವಾಗಿರುವ ಕಾರಣ ಕಡತವನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಸಲ್ಲಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿಯ ದಿನಾಂಕ : 01.10.2013ರ ನಿರ್ಣಯ.

**ನಿರ್ಣಯ:** **ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ : 21-06-2013ರ ಟಿಪ್ಪಣಿಯಲ್ಲಿ ವಾರ್ಡ್ ಸಂಖ್ಯೆ 142ರ ಪಂಪ ಮಹಾಕವಿ ರಸ್ತೆಯಲ್ಲಿರುವ ಮಹಾನಗರ ಪಾಲಿಕೆಯ ಈಜುಕೊಳದ ನಿರ್ವಹಣೆಯನ್ನು ಬಸವನಗುಡಿ ಅಕ್ವಾಟಿಕ್ ಸೆಂಟರ್ (ರಿ), ರವರು ನಿರ್ವಹಿಸುತ್ತಿದ್ದು, ಇವರು ಸಲ್ಲಿಸಿರುವ ಮನವಿಯ ಮೇರೆಗೆ ಸಾರ್ವಜನಿಕರ ಪ್ರವೇಶ ಶುಲ್ಕವನ್ನು ಪರಿಷ್ಕರಿಸುವ ಬಗ್ಗೆ ಪ್ರಸ್ತಾಪಿಸಿದ್ದು, ಟಿಪ್ಪಣಿಯಲ್ಲಿ ವಯಸ್ಕರಿಗೆ ಪ್ರಸ್ತಾಪಿಸಿರುವ ದರವು ಹೆಚ್ಚಾಗಿರುವುದರಿಂದ ವಯಸ್ಕರಿಗೆ ರೂ.25/- (ಇಪ್ಪತ್ತೈದು) ರಂತೆ ಹಾಗೂ ಮಕ್ಕಳಿಗೆ ರೂ.15/- (ಹದಿನೈದು) ಗಳಂತೆ ಇಂದಿನಿಂದ ಜಾರಿಗೆ ಬರುವಂತೆ ಹೆಚ್ಚಿಸಲು ಹಾಗೂ ವರ್ಷದಿಂದ ವರ್ಷಕ್ಕೆ ನಿರ್ವಹಣಾ ವೆಚ್ಚಗಳು ಹೆಚ್ಚಾಗುವ ಹಿನ್ನಲೆಯಲ್ಲಿ ಪ್ರತಿ ಹಣಕಾಸು ವರ್ಷದಲ್ಲಿ ಶೇಕಡ 5 ರಂತೆ ಹೆಚ್ಚಿಸುವುದೆಂದು ಮತ್ತು (1) ಸದಾಶಿವ ನಗರ (2) 3ನೇ ಬ್ಲಾಕ್ ಜಯನಗರ (3) ಹಂಪಿ ನಗರ (ಆರ್.ಪಿ.ಸಿ ಬಡಾವಣೆ, ವಿಜಯನಗರ)ದಲ್ಲಿರುವ ಪಾಲಿಕೆಯ ಈಜುಕೊಳಗಳ ನಿರ್ವಹಣಾದಾರರು ಸಮಿತಿಗೆ ಸಲ್ಲಿಸಿರುವ ಮನವಿಯನ್ನು ಪರಿಗಣಿಸಿ ಇವುಗಳಿಗೂ ಸಹ ಮೇಲ್ಕಂಡಂತೆ ಪರಿಷ್ಕೃತ ದರವನ್ನು ಹೆಚ್ಚಿಸಿ ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿದೆ.**

## *ಹೆಚ್ಚುವರಿ ವಿಷಯಗಳು:-*

## ***ವಿಷಯದ ಸಂಖ್ಯೆ :–ತೆಆಸ್ಥಾಸ/24/2013–14***

ಆಯುಕ್ತರ ಟಿಪ್ಪಣಿ ದಿನಾಂಕ : 17.10.2013ರಲ್ಲಿ ವಿವರಿಸಿರುವಂತೆ, ಮೇಲಿನ ಸರ್ಕಾರಿ ಆದೇಶ ದಲ್ಲಿ ರಾಜ್ಯ ಸರ್ಕಾರ ನಿವೃತ್ತಿ ವೇತನದಾರರಿಗೆ ಒಂದು ಕಂತು ಹೆಚ್ಚುವರಿ ತುಟ್ಟಿ ಭತ್ಯೆಯನ್ನು ಶೇ. 6% ದರದಲ್ಲಿ ಮಂಜೂರು ಮಾಡಿರುತ್ತದೆ. ಅದರಂತೆ ಈಗಾಗಲೇ ಮಂಜೂರಾಗಿರುವ ಶೇ. 9% ರ ಜೊತೆಗೆ ಶೇ. 6% ಸೇರಿ ಶೇ. 15% ದರದಲ್ಲಿ ತುಟ್ಟಿಭತ್ಯೆ ಪಾವತಿಸಬೇಕಾಗಿರುತ್ತದೆ. ಕರ್ನಾಟಕ ಸರ್ಕಾರಿ ಸೇವಾ ನಿಯಮಗಳ ಪ್ರಕಾರ ನಿವೃತ್ತಿ ವೇತನದ ಹೆಚ್ಚುವರಿ ತುಟ್ಟಿಭತ್ಯೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಳವಡಿಸಬೇಕಾಗಿರುತ್ತದೆ, ಸದರಿ ಸರ್ಕಾರಿ ಆದೇಶವನ್ನು ಪಾಲಿಕೆ ಪಿಂಚಣಿದಾರರಿಗೆ ಅಳವಡಿಸಿಕೊಂಡು ದಿನಾಂಕ : 01–07–2013 ರಿಂದ 30–09–2013 ರವರೆಗೆ ಶೇ. 15 ಹೆಚ್ಚುವರಿ ತುಟ್ಟಿ ಭತ್ಯೆಯ ಬಾಕಿಯನ್ನು ಪಾವತಿಸಬೇಕಾಗಿರುತ್ತದೆ.

ಸದರಿ ಹೆಚ್ಚುವರಿ ರೂ.1,37,10,567.00 ಗಳ ತುಟ್ಟಿ ಭತ್ಯೆಯ ವೆಚ್ಚವನ್ನು 2013–14 ನೇ ಸಾಲಿನ ಆಯವ್ಯಯದ ಅಂದಾಜುಗಳ ಲೆಕ್ಕ ಶೀರ್ಷಿಕೆ 02–ಸಾಮಾನ್ಯ ಆಡಳಿತ/ಆಡಳಿತ ವೆಚ್ಚಗಳು/ನೌಕರರ ನಿವೃತ್ತಿ ಸೌಲಭ್ಯಗಳ ಅಡಿಯಲ್ಲಿ ಅನುವು ಮಾಡಿಕೊಳ್ಳಲಾಗಿದೆ. ಈ ತುಟ್ಟಿಭತ್ಯೆ ಬಾಕಿ ಪಾವತಿ ಮಾಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿ ಮಂಡಿಸಿದೆ.

**ನಿರ್ಣಯ : ಆಯುಕ್ತರ ದಿನಾಂಕ : 17.10.2013ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

## ***ವಿಷಯದ ಸಂಖ್ಯೆ :–ತೆಆಸ್ಥಾಸ/25/2013–14***

ಆಯುಕ್ತರ ಟಿಪ್ಪಣಿ ದಿನಾಂಕ : 21.10.2013ರಲ್ಲಿ ವಿವರಿಸಿರುವಂತೆ, ಸರ್ಕಾರವು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 21 ಎಸ್ ಆರ್ ಪಿ 2013,ಬೆಂಗಳೂರು, ದಿನಾಂಕ 03ನೇ ಅಕ್ಟೋಬರ್ 2013ರ ಆದೇಶದಲ್ಲಿ ದಿನಾಂಕ 01.07.2013 ರಿಂದ ಜಾರಿಗೆ ಬರುವಂತೆ ರಾಜ್ಯ ಸರ್ಕಾರಿ ನೌಕರರುಗಳಿಗೆ 2012ರ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ಹಾಲಿ ಇರುವ ತುಟ್ಟಿ ಭತ್ಯೆ ದರವನ್ನು ಮೂಲ ವೇತನದ ಶೇಕಡಾ 9 ರಿಂದ ಶೇಕಡಾ 15 ಕ್ಕೆ ಹೆಚ್ಚಿಸಿ ಮಂಜೂರಾತಿ ನೀಡಿರುತ್ತದೆ. ಸರ್ಕಾರವು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 21 ಎಸ್ ಆರ್ ಪಿ 2013,ಬೆಂಗಳೂರು, ದಿನಾಂಕ 03ನೇ ಅಕ್ಟೋಬರ್ 2013ರ ಆದೇಶದಲ್ಲಿ ತಿಳಿಸಿರುವಂತೆ ಮಂಜೂರಾಗಿರುವ ತುಟ್ಟಿ ಭತ್ಯೆಯನ್ನು ನಗದಾಗಿ ಮರುಪಾವತಿಸಲು ಆದೇಶವಾಗಿರುತ್ತದೆ. (ಸರ್ಕಾರದ ಆದೇಶದ ಪ್ರತಿಯನ್ನು ಮಾಹಿತಿಗಾಗಿ ಲಗತ್ತಿಸಿದೆ)

ಆದ್ದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸಂಖ್ಯೆ 10961 ಖಾಯಂ ಅಧಿಕಾರಿ/ನೌಕರರುಗಳಿಗೆ ಪ್ರಸ್ತುತ ಮಾಹೆಯಾನ ಒಟ್ಟೂ ಮೂಲ ವೇತನ 16,34,95,619/– ರೂಗಳನ್ನು ವೆಚ್ಚ ಮಾಡಲಾಗುತ್ತಿದ್ದು, ಪಾಲಿಕೆಯ 2013–14ನೇ ಸಾಲಿನ ಆಯವ್ಯಯದಲ್ಲಿ ಸಾಮಾನ್ಯ ಆಡಳಿತ,ವೇತನ ಮತ್ತು ಇತರೇ ವೆಚ್ಚಗಳು ಲೆಕ್ಕಶೀರ್ಷಿಕೆಯಡಿಯಲ್ಲಿ ಶೇ6% ಹೆಚ್ಚುವರಿ ತುಟ್ಟಿ ಭತ್ಯೆಯನ್ನು ಅವಕಾಶ ಮಾಡಿಕೊಳ್ಳುವ ಸಲುವಾಗಿ ಮೇಲ್ಕಂಡ ಸರ್ಕಾರದ ಆದೇಶದನ್ವಯ ದಿ 01.07.2013 ರಿಂದ ಜಾರಿಗೆ ಬರುವಂತೆ ಮೂಲ ವೇತನದ ಶೇ 6% ತುಟ್ಟಿ ಭತ್ಯೆಯನ್ನು ಪಾಲಿಕೆಯ ಅಧಿಕಾರಿ /ನೌಕರರಿಗೆ ನೀಡುವುದರಿಂದ ಮಾಹೆಯಾನ ರೂ 98,09,737/– ಗಳು ಅಧಿಕವಾಗಿ ಹೆಚ್ಚಿನ ವೆಚ್ಚವಾಗಲಿದೆ. ಸದರಿ ಪ್ರಸ್ತಾವನೆಯನ್ನು ಮಾನ್ಯ ಅಯುಕ್ತರವರ ಅನುಮೋದನೆಯೊಂದಿಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸುವ ಬಗ್ಗೆ ಮುಂದಿನ ಕ್ರಮವಹಿಸಬಹುದೆಂದು ಮುಖ್ಯ ಲೆಕ್ಕಾಧಿಕಾರಿಯವರು ದಿನಾಂಕ : 19.10.2013 ವರದಿಯಲ್ಲಿ ಅಭಿಪ್ರಾಯ ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 21 ಎಸ್ ಆರ್ ಪಿ 2013,ಬೆಂಗಳೂರು, ದಿನಾಂಕ 03ನೇ ಅಕ್ಟೋಬರ್ 2013ರ ಸರ್ಕಾರದ ಆದೇಶವನ್ನು ನಗರ ಪಾಲಿಕೆಯಲ್ಲಿ ಆಳವಡಿಸಿಕೊಳ್ಳುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ಬೃಹತ್ ಬೆಂಗಳುರು ಮಹಾನಗರ ಪಾಲಿಕೆಯ ಸಭೆಯ ಮುಂದೆ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ : ಆಯುಕ್ತರ ದಿನಾಂಕ : 21.10.2013ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

## ವಿಷಯದ ಸಂಖ್ಯೆ :–ತೆಆಸ್ಥಾಸ/26/2013–14

ಆಯುಕ್ತರ ಟಿಪ್ಪಣಿ ದಿನಾಂಕ : 16.10.2013ರಲ್ಲಿ ವಿವರಿಸಿರುವಂತೆ, ಸರ್ಕಾರವು ಸರ್ಕಾರದ ಆದೇಶ ಸಂಖ್ಯೆ ಆಇ 6 ಮಕಮು2012, ಬೆಂಗಳೂರು ದಿನಾಂಕ 18.06.2012ರ ಆದೇಶದಲ್ಲಿ ರಾಜ್ಯ ಸರ್ಕಾರಿ ನೌಕರರುಗಳಿಗೆ ಮಂಜೂರು ಮಾಡುತ್ತಿರುವ ವಿವಿಧ ಮುಂಗಡಗಳ ಮೊತ್ತವನ್ನು ಹೆಚ್ಚಿಸಿ ಈ ಕೆಳಕಂಡಂತೆ ಮುಂಗಡವನ್ನು ಮಂಜೂರು ಮಾಡಲು ಆದೇಶಿಸಿರುತ್ತದೆ.

1. **ವಾಹನಗಳ ಖರೀದಿ ಮುಂಗಡ**

**ಮೋಟಾರು ಕಾರು ಖರೀದಿ ಮುಂಗಡ**

1.1 ಮಾಸಿಕವಾಗಿ ರೂ 38,100/– ಅಥವಾ ಅದಕ್ಕೂ ಹೆಚ್ಚಿನ ಮೂಲ ವೇತನವನ್ನು ಪಡೆಯುತ್ತಿರುವ ರಾಜ್ಯ ಉದ್ಯೋಗಿ ವೃಂದದಲ್ಲಿ ಖಾಯಂ ಆಗಿ ಸೇರ್ಪಡೆಯಾಗಿರುವ ಐಎಎಸ್,ಐಪಿಎಸ್, ಐಎಫ್ಎಸ್ ದರ್ಜೆಯ ಅಖಿಲ ಭಾರತ ಸೇವೆಗಳಿಗೆ ಸೇರಿದ ಅಧಿಕಾರಿಗಳೂ ಸೇರಿದಂತೆ,ಒಬ್ಬ ಸರ್ಕಾರಿ ನೌಕರನಿಗೆ ಮೋಟಾರು ಕಾರನ್ನು ಖರೀದಿಸಲು ಈ ಮುಂದಿನಂತೆ ಮುಂಗಡವನ್ನು ಮಂಜೂರು ಮಾಡಬಹುದು.

| | |
|---|---|
| ಅ) ಮೊದಲನೆಯ ಬಾರಿ | ರೂ 3,00,000/– ಅಥವಾ 16 ತಿಂಗಳುಗಳ ಮೂಲ ವೇತನ ಅಥವಾ ಖರೀದಿಸಬೇಕಾದ ವಾಹನದ ಬೆಲೆ ಇವುಗಳಲ್ಲಿ ಯಾವುದು ಕಡಿಮೆಯೋ ಅದಕ್ಕೆ ಸೀಮಿತಗೊಳಿಸಿ |
| ಆ) ಎರಡನೆಯ ಅಥವಾ ತರುವಾಯ ಸಂಧರ್ಬದಲ್ಲಿ | ರೂ 3,00,000/– ಅಥವಾ ಸರ್ಕಾರಿ ಸಾಲದಿಂದ ಖರೀದಿಸಲಾದ ಹಿಂದಿನ ವಾಹನ ಮಾರಾಟದಿಂದ ಗಳಿಸಿದ ಲಾ`ಭವನ್ನು ಕಳೆದು ಉಳಿತಾಯ ಮೊತ್ತ (ಅಂದರೆ ಹಳೆಯ ಕಾರು ಖರೀದಿಸಿದ್ದ ಬೆಲೆಗಿಂತ ಈಗಿನ ಮಾರಾಟದಿಂದ ಬಂದ ಹೆಚ್ಚಿನ ಹಣ) ಅಥವಾ 16 ತಿಂಗಳುಗಳ ಮೂಲ ವೇತನ ಅಥವಾ ಖರೀದಿಸಬೇಕಾದ ವಾಹನದ ಬೆಲೆ ಇವುಗಳಲ್ಲಿ ಯಾವುದು ಕಡಿಮೆಯೋ ಅದಕ್ಕೆ ಸೀಮಿತವಾಗಿ |

**ಮೋಟಾರು ಸೈಕಲ್/ಸ್ಕೂಟರ್ ಖರೀದಿ ಮುಂಗಡ**

1.2. ಮಾಸಿಕ ರೂ 19,500/– ಅಥವಾ ಅದಕ್ಕೂ ಹೆಚ್ಚಿನ ಮೂಲ ವೇತನ ಪಡೆಯುತ್ತಿರುವ ರಾಜ್ಯ ಉದ್ಯೋಗಿ ವೃಂದದಲ್ಲಿ ಖಾಯಂ ಆಗಿ ಸೇರ್ಪಡೆಯಾಗಿರುವ ಐಎಎಸ್,ಐಪಿಎಸ್, ಐಎಫ್ಎಸ್ ದರ್ಜೆಯ ಅಖಿಲ ಭಾರತ ಸೇವೆಗಳಿಗೆ ಸೇರಿದ ಅಧಿಕಾರಿಗಳೂ ಸೇರಿದಂತೆ,ಒಬ್ಬ ಸರ್ಕಾರಿ ನೌಕರನಿಗೆ ಮೋಟಾರು ಸೈಕಲ್/ಸ್ಕೂಟರ್ ಖರೀದಿಸಲು ಈ ಮುಂದಿನಂತೆ ಮುಂಗಡವನ್ನು ಮಂಜೂರು ಮಾಡಬಹುದು.

| |
|---|
| ಮೊದಲನೆಯ ಬಾರಿ ಅಥವಾ ತರುವಾಯ ಸಂಧರ್ಬದಲ್ಲಿ ಹೊಸ ಅಥವಾ ಉಪಯೋಗಿಸಿರುವ ವಾಹನವನ್ನು ಖರೀದಿಸಲು ಗರಿಷ್ಟ ಮಿತಿ ರೂ 50,000/– ಅಥವಾ 8 ತಿಂಗಳ ಮೂಲ ವೇತನ ಅಥವಾ ವಾಹನದ ಬೆಲೆ ಇವುಗಳಲ್ಲಿ ಯಾವುದು ಕಡಿಮೆಯೋ ಅದಕ್ಕೆ ಸೀಮಿತಗೊಳಿಸಿ ಮಂಜೂರು ಮಾಡಬಹುದು. |

**ಬೈಸಿಕಲ್ ಖರೀದಿ ಮುಂಗಡ**

1.3. ಮೊದಲನೇ ಬಾರಿ ಅಥವಾ ತರುವಾಯದ ಸಂಧರ್ಬದಲ್ಲಿ ಮಾಸಿಕ ರೂ 16,400/– ರವರೆಗೆ ಮೂಲ ವೇತನ ಪಡೆಯುತ್ತಿರುವ ಸರ್ಕಾರಿ ನೌಕರನಿಗೆ,ಬೈಸಿಕಲ್ ಖರೀದಿಸಲು ಗರಿಷ್ಟ ರೂ 3,000/– ರವರೆಗೆ ಮುಂಗಡವನ್ನು ಮಂಜೂರು ಮಾಡಬಹುದು.

1.4. ಮೋಟಾರು ಕಾರು, ಮೋಟಾರು ಸೈಕಲ್, ಸ್ಕೂಟರ್ ಮತ್ತು ಬೈಸಿಕಲ್ ಖರೀದಿಯ ಮುಂಗಡ ಮಂಜೂರಾತಿಯನ್ನು ಕ್ರಮಬದ್ಧಗೊಳಿಸುವುದಕ್ಕೆ ಸಂಬಂಧಿಸಿದಂತೆ ಹಾಲಿ ಇರುವ ಷರತ್ತುಗಳೊಂದಿಗೆ ದಿನಾಂಕ 21.10.1994 ರ ಸರ್ಕಾರಿ ಆದೇಶ ಸಂಖ್ಯೆ ಆಇ 48 ಮಕಮು 94ರ ಆದೇಶದಲ್ಲಿ ವಿಧಿಸಿರುವ ಇತರೆ ಷರತ್ತುಗಳು ಮುಂದುವರೆದು ಅನ್ವಯಿಸುತ್ತದೆ.

**2. ಗಣಕಯಂತ್ರ ಮುಂಗಡ**

2.1. ಮೊದಲನೇ ಬಾರಿ ಅಥವಾ ತರುವಾಯದ ಸಂಧರ್ಬಗಳಲ್ಲಿ ಮಾಸಿಕ ರೂ 22,200/– ಅಥವಾ ಅದಕ್ಕೂ ಹೆಚ್ಚಿನ ಮೂಲ ವೇತನವನ್ನು ಪಡೆಯುತ್ತಿರುವ ರಾಜ್ಯ ಉದ್ಯೋಗಿ ವೃಂದದಲ್ಲಿ ಖಾಯಂ ಆಗಿ ಸೇರ್ಪಡೆಯಾಗಿರುವ ಐಎಎಸ್,ಐಪಿಎಸ್, ಐಎಫ್ಎಸ್ ದರ್ಜೆಯ ಅಖಿಲ ಭಾರತ ಸೇವೆಗಳಿಗೆ ಸೇರಿದ ಅಧಿಕಾರಿಗಳೂ ಸೇರಿದಂತೆ, ಒಬ್ಬ

ಸರ್ಕಾರಿ ನೌಕರನಿಗೆ ಸ್ವಂತ ಗಣಕಯಂತ್ರದ ಬೆಲೆ ಅಥವಾ ರೂ 40,000/- ಇವೆರಡರಲ್ಲಿ ಯಾವುದು ಕಡಿಮೆಯೋ ಅದಕ್ಕೆ ಸೀಮಿತಗೊಳಿಸಿ ಮಂಜೂರು ಮಾಡಬಹುದು. ಸರ್ಕಾರಿ ನೌಕರ ಗಣಕ ಯಂತ್ರ ಖರೀದಿಸಿದ ನಂತರ ಈ ಆದೇಶದೊಂದಿಗೆ ಲಗತ್ತಿಸಲಾದ ಅನುಬಂಧದಂತೆ ಪ್ರಮಾಣ ಪತ್ರವನ್ನು ನೀಡತಕ್ಕದ್ದು.

2.2. ಗಣಕ ಯಂತ್ರ ಖರೀದಿ ಮುಂಗಡ ಮಂಜೂರಾತಿಯನ್ನು ಕ್ರಮಬದ್ಧಗೊಳಿಸುವುದಕ್ಕೆ ಸಂಬಂಧಿಸಿದಂತೆ ಹಾಲಿ ಇರುವ ಷರತ್ತುಗಳೊಂದಿಗೆ ದಿನಾಂಕ 21.10.1994 ರ ಸರ್ಕಾರಿ ಆದೇಶ ಸಂಖ್ಯೆ ಆಇ 48 ಮಕಮು 94ರ ಆದೇಶದಲ್ಲಿ ವಿಧಿಸಿರುವ ಇತರೆ ಷರತ್ತುಗಳು ಮುಂದುವರೆದು ಅನ್ವಯಿಸುತ್ತದೆ.

**3. ಸಾಧನ ಸಾಮಗ್ರಿ ಮುಂಗಡ**

3.1. ನವದೆಹಲಿ ಅಥವಾ ರಾಜ್ಯದ ಹೊರಗಿನ ಸ್ಥಳಗಳಿಗೆ ಕೆಲಸಕ್ಕಾಗಿ ನಿಯೋಜಿಸಲ್ಪಟ್ಟ ಅಖಿಲ ಭಾರತ ಸೇವೆಯ ಅಧಿಕಾರಿಗಳೂ ಸೇರಿದಂತೆ, ಒಬ್ಬ ಸರ್ಕಾರಿ ನೌಕರನಿಗೆ ಬಡ್ಡಿ ರಹಿತ ರೂ 12,000/- ಗರಿಷ್ಟತೆಗೊಳಪಟ್ಟು ಮೂರು ತಿಂಗಳ ಮೂಲ ವೇತನ ಇದರಲ್ಲಿ ಯಾವುದು ಕಡಿಮೆಯೋ ಅದನ್ನು ಮಂಜೂರು ಮಾಡಬಹುದು.

3.2 ಈ ಮಂಜೂರಾತಿಯನ್ನು ಕ್ರಮಬದ್ಧಗೊಳಿಸುವುದಕ್ಕೆ ಸಂಬಂಧಿಸಿದಂತೆ ಹಾಲಿ ಇರುವ ಷರತ್ತುಗಳೊಂದಿಗೆ ದಿನಾಂಕ 21.10.1994 ರ ಸರ್ಕಾರಿ ಆದೇಶ ಸಂಖ್ಯೆ ಆಇ 48 ಮಕಮು 94ರ ಆದೇಶದಲ್ಲಿ ವಿಧಿಸಿದ ಇತರೆ ಷರತ್ತುಗಳು ಮುಂದುವರೆದು ಅನ್ವಯಿಸುತ್ತದೆ.

**4. ಹಬ್ಬದ ಮುಂಗಡ**

4.1 ರಾಜ್ಯ ಉದ್ಯೋಗಿ ವೃಂದದಲ್ಲಿ ಖಾಯಂ ಆಗಿ ಸೇರ್ಪಡೆಯಾಗಿರುವ ಅಖಿಲ ಭಾರತ ಸೇವೆಯ ಅಧಿಕಾರಿಗಳೂ ಸೇರಿದಂತೆ, ಒಬ್ಬ ಖಾಯಂ ಸರ್ಕಾರಿ ನೌಕರನಿಗೆ ಒಂದು ಆರ್ಥಿಕ ವರ್ಷದಲ್ಲಿ ಒಂದು ಬಾರಿಗೆ ರೂ 5,000/- ಬಡ್ಡಿ ರಹಿತ ಹಬ್ಬದ ಮುಂಗಡವನ್ನು ಮಂಜೂರು ಮಾಡಬಹುದು.

4.2 ದಿನಾಂಕ 21.10.1994 ರ ಸರ್ಕಾರಿ ಆದೇಶ ಸಂಖ್ಯೆ ಆಇ 48 ಮಕಮು 94ರಲ್ಲಿ ಹಬ್ಬದ ಮುಂಗಡವನ್ನು ಮಂಜೂರು ಮಾಡಲು ಅನುಸರಿಸಲಾಗುತ್ತಿರುವ ಷರತ್ತುಗಳು ಮುಂದುವರೆದು ಅನ್ವಯಿಸುತ್ತದೆ.

**5. ಸೋಲಾರ್ ವಾಟರ್ ಹೀಟರ್ ಮುಂಗಡ**

5.1. ಸೋಲಾರ್ ವಾಟರ್ ಹೀಟರ್ ಖರೀದಿ ಮುಂಗಡವನ್ನು ರೂ 25,000/- ಅಥವಾ ಅದರ ವಾಸ್ತವಿಕ ಬೆಲೆ ಇದರಲ್ಲಿ ಯಾವುದು ಕಡಿಮೆಯೋ ಅದಕ್ಕೆ ಸೀಮಿತಗೊಳಿಸಿ ಮಂಜೂರು ಮಾಡಬಹುದು. ಮತ್ತು ದಿನಾಂಕ 21.10.1994 ರ ಸರ್ಕಾರಿ ಆದೇಶ ಸಂಖ್ಯೆ ಆಇ 48 ಮಕಮು 94ರಲ್ಲಿ ವಿಧಿಸಿರುವ ಷರತ್ತುಗಳು ಮುಂದುವರೆದು ಅನ್ವಯಿಸುತ್ತದೆ.

**6. ಸೋಲಾರ್ ಕುಕ್ಕರ್ ಮುಂಗಡ**

6.1 ಸೋಲಾರ್ ಕುಕ್ಕರ್ ಖರೀದಿ ಮುಂಗಡವನ್ನು ರೂ 1,500/- ಅಥವಾ ಅದರ ವಾಸ್ತವಿಕ ಬೆಲೆ ಇದರಲ್ಲಿ ಯಾವುದು ಕಡಿಮೆಯೋ ಅದಕ್ಕೆ ಸೀಮಿತಗೊಳಿಸಿ ಮಂಜೂರು ಮಾಡಬಹುದು. ಮತ್ತು ದಿನಾಂಕ 21.10.1994 ರ ಸರ್ಕಾರಿ ಆದೇಶ ಸಂಖ್ಯೆ ಆಇ 48 ಮಕಮು 94ರಲ್ಲಿ ವಿಧಿಸಿರುವ ಷರತ್ತುಗಳು ಮುಂದುವರೆದು ಅನ್ವಯಿಸುತ್ತದೆ.

ಈ ಆದೇಶ ದಿನಾಂಕ 1ನೇ ಏಪ್ರೀಲ್ 2012 ರಿಂದ ಜಾರಿಗೆ ಬರತಕ್ಕದ್ದು ಎಂದು ಆದೇಶಿಸಿರುತ್ತದೆ.(ಸರ್ಕಾರಿ ಆದೇಶದ ಪ್ರತಿಯನ್ನು ಲಗ್ತ ಇಟ್ಟಿದೆ)

ಸರ್ಕಾರದ ಆದೇಶ ಸಂಖ್ಯೆ ಆಇ6 ಮಕಮು2012,ಬೆಂಗಳೂರು ದಿನಾಂಕ 18.06.2012ರನ್ವಯ ಸರ್ಕಾರದಲ್ಲಿ ವಿವಿಧ ಮುಂಗಡಗಳಾದ, ವಾಹನ ಖರೀದಿ ಮುಂಗಡ,ಗಣಕಯಂತ್ರ ಮುಂಗಡ, ಸಾಧನ ಸಾಮಗ್ರಿ ಮುಂಗಡ, ಹಬ್ಬದ ಮುಂಗಡ,ಸೋಲಾರ್ ವಾಟರ್ ಹೀಟರ್ ಮುಂಗಡ, ಸೋಲಾರ್ ಕುಕ್ಕರ್ ಮುಂಗಡಗಳ ಮೊತ್ತಗಳನ್ನು ಪರಿಷ್ಕರಣೆ ಮಾಡಿದ್ದು, ಸದರಿ ಸೌಲಭ್ಯಗಳನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ಪಡೆದು, ನಂತರ ವಿವಿಧ ಮುಂಗಡಗಳನ್ನು ಪಾಲಿಕೆಯ ಅರ್ಹ ಅಧಿಕಾರಿ/ನೌಕರರಿಗೆ ವಿಸ್ತರಿಸಬಹುದೆಂದು ಮಾನ್ಯ ಮುಖ್ಯ ಲೆಕ್ಕಾಧಿಕಾರಿಗಳು ದಿನಾಂಕ : 25.03.2013 ರಂತೆ ಅಭಿಪ್ರಾಯ ವರದಿಯನ್ನು ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ ಆಇ 6 ಮಕಮು2012, ಬೆಂಗಳೂರು ದಿನಾಂಕ 18.06.2012ರ ಸರ್ಕಾರಿ ಆದೇಶವನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಟಿಪ್ಪಣಿಯನ್ನು ಅನುಮೋದನೆಗಾಗಿ ಮಂಡಿಸಿದೆ.

**ನಿರ್ಣಯ : ಆಯುಕ್ತರ ದಿನಾಂಕ : 16.10.2013ರ ಟಿಪ್ಪಣಿಯನ್ನು ಸಮಿತಿಯು**

ಒಪ್ಪಿದೆ.

(ಡಾ॥ ಶಿವಪ್ರಸಾದ್. ಎಂ.ಎಸ್)
ಅಧ್ಯಕ್ಷರು
ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ